**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಶಿಕಾರಿಪುರ.**

**ಸಿಸಿ ನಂ.** 412/2025

| | | |
|---|---|---|
| ಸಾಕ್ಷಿದಾರರ ಹೆಸರು | ಸೌಭಾಗ್ಯ | ಪಿಡಬ್ಲ್ಯು- 1 |
| ಗಂಡನ ಹೆಸರು | ಅಣ್ಣಪ್ಪ ಹೆಚ್ ಬಿ | ಸಿಡಬ್ಲ್ಯು- 1 |
| ವಯಸ್ಸು | 29 | |
| ಉದ್ಯೋಗ | ಕೂಲಿ | ಪ್ರತಿಜ್ಞೆ ಮೇರೆಗೆ ದಿನಾಂಕಃ |
| ವಾಸ | ಹನುಮಸಾಗರ | **16.03.2026.** |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದಃ-**

1. ನನಗೆ ಆರೋಪಿಗಳ ಪರಿಚಯ ಇದೆ. ಅವರು ನಮ್ಮ ಸಂಬಂಧಿಕರು. ಚಾಸಾ-2 ನನ್ನ ಅಕ್ಕ. ಚಾಸಾ - 3 ನನ್ನ ಭಾವ.

2. ದಿಃ 30.04.2025 ರಂದು ನಾನು ಧೂಪದ ಹಳ್ಳಿಯ ನನ್ನ ಅಕ್ಕನ ಮನೆಗೆ ಬಂದಿದ್ದೆನು. ಮಾರನೇ ದಿನ ಬೆಳಿಗ್ಗೆ ಅಂದರೆ ದಿಃ 01.05.2025 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ಆರೋಪಿಗಳು ನನಗೆ ಅವಾಚ್ಯವಾಗಿ ನಿಮ್ಮ ಭಾವನನ್ನು ಇಟ್ಟುಕೊಂಡಿದ್ದೀಯಾ, ಅದಕ್ಕೆ ಬಂದಿದ್ದೀಯಾ ಎಂದು ಬೈಯುತ್ತಿದ್ದರು. ನಂತರ ಆರೋಪಿಗಳೆಲ್ಲರೂ ನನ್ನ ಕೂದಲು ಹಿಡಿದು ಎಳೆದಾಡಿ, ಬಟ್ಟೆಯಲ್ಲಾ ಎಳೆದರು. ನಂತರ ನನ್ನ ಅಕ್ಕ ಮತ್ತು ನನ್ನ ಅಕ್ಕನ ಗಂಡ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ನನ್ನನ್ನು ಅಡ್ಮಿಟ್ ಮಾಡಿರುತ್ತಾರೆ.

3. ನಂತರ ದಿಃ 04.05.2025 ರಂದು ನಾನು ಆಸ್ಪತ್ರೆಯಿಂದ ಬಂದು ಠಾಣೆಗೆ ದೂರು ಕೊಟ್ಟಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರನ್ನು ನಿಪಿ - 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 1(ಎ) ಎಂದು ಗುರುತಿಸಲಾಯಿತು.

4. ನಂತರ ದಿಃ 08.05.2025 ರಂದು ಪೋಲೀಸರು ಸ್ಥಳಕ್ಕೆ ಬಂದಿದ್ದು ನಾನು ಸ್ಥಳ ತೋರಿಸಿಕೊಟ್ಟ ಮೇರೆಗೆ ಚಾಸಾ – 4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 12 ಗಂಟೆವರೆಗೆ ಸ್ಥಳ ಮಹಜರ್ ಮಾಡಿ, ಅಲ್ಲಿ ಭಾವ ಚಿತ್ರ ತೆಗೆದು ನಮ್ಮ ಸಹಿ ಪಡೆದಿರುತ್ತಾರೆ. ಸಾಕ್ಷಿ ಸದರಿ ಮಹಜರ್ ನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ – 2 ಎಂದು ಸಾಕ್ಷಿಯ ಸಹಿಯನ್ನು ನಿಪಿ – 2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ಭಾವ ಚಿತ್ರ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ – 3 ಮತ್ತು 4 ಎಂದು ಗುರುತಿಸಲಾಯಿತು. ಆ ದಿನ ಮಹಜರ್ ಸಮಯದಲ್ಲಿ ಸ್ಥಳ ನಕಾಶೆ ಸಹ ಮಾಡಿರುತ್ತಾರೆ ಮತ್ತು ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಈ ವಿಚಾರವಾಗಿ ನಾನು ನನ್ನ ಹೇಳಿಕೆ ಸಹ ಕೊಟ್ಟಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ ಆರೋಪಿ 1 ಮತ್ತು 4 ರವರು ಗೈರು ಹಾಜರಿದ್ದು, ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

**(ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲದ ಕಾರಣ ವಕೀಲರ ಕೋರಿಕೆ ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**ಮರು ವಿಚಾರಣೆ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಬೆರಳಚ್ಚು ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಶಿಕಾರಿಪುರ.**